ಓಎಸ್ 09/2023

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 17.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 4 ರಿಂದ 7ನೇ ಪ್ರತಿವಾದಿಗಳ ಪರ ವಕೀಲರಿಂದ**

ತಿಮ್ಮಾಚಾರಿ ಮತ್ತು ಗೋಪಾಲಚಾರಿ ಅಣ್ಣ-ತಮ್ಮಂದಿರು ಎಂದರೆ ಸರಿ. 4ನೇ ಪ್ರತಿವಾದಿಯ ಗಂಡ ನಾಗಾಚಾರಿ ತಿಮ್ಮಾಚಾರಿಯವರು ಮೊದಲನೇ ಹೆಂಡತಿಯ ಮಗ ಎಂದರೆ ಸರಿ. 1 ರಿಂದ 3ನೇ ಪ್ರತಿವಾದಿಗಳು ತಿಮ್ಮಾಚಾರಿರವರ 2ನೇ ಹೆಂಡತಿಯ ಮಕ್ಕಳು ಎಂದರೆ ಸರಿ. ನಾಗಾಚಾರಿ ರವರ ತಾಯಿ ಅಂದರೆ ತಿಮ್ಮಾಚಾರಿ ರವರ ಮೊದಲನೇ ಹೆಂಡತಿ ನಾಗಾಚಾರಿ ರವರಿಗೆ 5-6 ವರ್ಷ ವಯಸ್ಸಿದ್ದಾಗಲೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾಗಾಚಾರಿ ರವರ ತಾಯಿ ಮೃತಪಟ್ಟ ಕಾರಣ ನನ್ನ ತಂದೆ ಗೋಪಾಲಚಾರಿ ರವರು ನಾಗಾಚಾರಿ ರವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ತಿಮ್ಮಾಚಾರಿರವರು ನಾಗಾಚಾರಿ ರವರನ್ನು ನೋಡಿಕೊಳ್ಳಲು 2ನೇ ಮದುವೆ ಮಾಡಿಕೊಂಡಿದ್ದು ಅವರೇ ನಾಗಾಚಾರಿ ರವರನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ತಿಮ್ಮಾಚಾರಿರವರ 2ನೇ ಹೆಂಡತಿಯು ನಾಗಾಚಾರಿಯವರನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ನನ್ನ ತಂದೆ ಗೋಪಾಲಚಾರಿ ರವರೇ ನಾಗಾಚಾರಿ ರವರನ್ನು ನೋಡಿಕೊಳ್ಳುತ್ತಿದ್ದರು, ವಿದ್ಯಾಭ್ಯಾಸ ಕೊಡಿಸಿದ್ದಾರೆ ಮತ್ತು ಕೆಲಸಕ್ಕೆ ಸೇರಿಸಿದ್ದರು ಎಂದರೆ ಸುಳ್ಳು . ಈ ಕಾರಣದಿಂದಾಗ ನನ್ನ ತಂದೆ ಗೋಪಾಲಚಾರಿ ರವರು ದಾವ ಆಸ್ತಿಗಳನ್ನು ನಾಗಾಚಾರಿರವರಿಗೆ 1983-84 ರಲ್ಲಿ ಎಂ.ಆರ್ 11/83-84 ರಂತೆ ಒಪ್ಪಿಗೆ ಪತ್ರದ ಮೇಲೆ ಹಸ್ತಾಂತರ ಮಾಡಿದ್ದಾರೆ ಎಂದರೆ ಸುಳ್ಳು , ಸಾಕ್ಷಿ ಮುಂದುವರೆದು ನಾಗಾಚಾರಿ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು ಅವರೇ ಖಾತೆ ಮಾಡಿಕೊಂಡಿದ್ದಾರೆ, ನನ್ನ ತಂದೆ ವಿಧ್ಯಾವಂತನಲ್ಲ ಎಂದು ನುಡಿಯುತ್ತಾರೆ. 1983-84 ರಿಂದ 2011 ರವರೆಗೆ ನಾಗಾಚಾರಿ ರವರೇ ದಾವ ಆಸ್ತಿಗಳಲ್ಲಿ ಬೇಸಾಯ ಮಾಡುತ್ತಿದ್ದರು ಎಂದರೆ ಸುಳ್ಳು . 1996ನೇ ಇಸವಿಯಲ್ಲಿ ದಾವ ಆಸ್ತಿಗಳನ್ನು ನಾಗಾಚಾರಿ ರವರು ಅವರ ಹೆಂಡತಿಗೆ ಖಾತೆ ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು .

ನಾಗಾಚಾರಿ ಮತ್ತು 4 ರಿಂದ 6ನೇ ಪ್ರತಿವಾದಿಗಳು ದಿಃ05.05.2011 ರಂದು ದಾವ ಆಸ್ತಿಗಳನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2011 ರಿಂದ ದಾವ ಆಸ್ತಿಗಳ ಖಾತೆ 7ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರವಾದಾಗಿನಿಂದಲೂ 7ನೇ ಪ್ರತಿವಾದಿಯು ದಾವ ಆಸ್ತಿಗಳ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

2. ಗಣೇಶಾಚಾರಿ ರವರು ತಿಮ್ಮಾಚಾರಿ ರವರ 2ನೇ ಹೆಂಡತಿಯ ಮೊದಲನೇ ಮಗನಾಗಿರುತ್ತಾರೆ. 1 ರಿಂದ 3ನೇ ಪ್ರತಿವಾದಿಗಳು 4 ರಿಂದ 7ನೇ ಪ್ರತಿವಾದಿಗಳ ವಿರುದ್ಧ ಒಂದು ದಾವೆ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ವಜಾಗೊಂಡ ಕಾರಣ 1 ರಿಂದ 3ನೇ ಪ್ರತಿವಾದಿಗಳೂ ನನ್ನ ಮೂಲಕ ಈ ದಾವೆ ದಾಖಲು ಮಾಡಿಸಿದ್ದಾರೆ ಎಂದರೆ ಸುಳ್ಳು . ದಾವ ಆಸ್ತಿಗಳು ನನ್ನ ತಂದೆ ಗೋಪಾಲಚಾರಿ ರವರಿಗೆ ಸರ್ಕಾರದಿಂದ ದರ್ಕಾಸ್ತು ಮೂಲಕ ಮಂಜೂರಾಗಿರುತ್ತದೆ. ಆ ಬಗ್ಗೆ ದಾಖಲಾತಿಗಳನ್ನು ಹಾಜುರುಪಡಿಸಿದ್ದೇನೆ. ದಾವ ಐಟಂ ನಂಃ 1ರ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಜಮೀನು, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಸರ್ಕಾರಿ ಜಮೀನು, ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಮತ್ತು ರಸ್ತೆ ಇರುತ್ತದೆ. ದಾವ ಐಟಂ ನಂಃ 2ರ ಚೆಕ್ಕುಬಂದಿ ಪೂರ್ವಕ್ಕೆ 326ರ ಜಮೀನು, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಸರ್ಕಾರಿ ಜಮೀನು, ದಕ್ಷಿಣಕ್ಕೆ ನೀರು ಹರಿಯುವ ಹಳ್ಳ ಮತ್ತು ರಸ್ತೆ ಇರುತ್ತದೆ. ದಾವ ಐಟಂ ನಂಃ 1ನೇ ಸ್ವತ್ತನ್ನು 7ನೇ ಪ್ರತಿವಾದಿಯು ಖರೀದಿ ಮಾಡಿರುವುದರಿಂದ ಆತನು ಅದರ ಮಾಲೀಕನಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು . ದಾವ ಐಟಂ ನಂಃ 2ನೇ ಸ್ವತ್ತನ್ನು ನನ್ನ ತಂದೆ ನಾಗಾಚಾರಿ ರವರಿಗೆ 1983-84 ನೇ ಇಸವಿಯಲ್ಲಿ ನೀಡಿರುವುದರಿಂದ 4 ರಿಂದ 6ನೇ ಪ್ರತಿವಾದಿಗಳೇ ಅದರ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು .

3. ನನ್ನ ಸಹೋದರರು 1985ನೇ ಇಸವಿಯಲ್ಲಿ ದಾವ ಆಸ್ತಿಗಳ ಖಾತೆಗಳು ಬದಲವಣೆಯಾಗಿವೆ ಎಂದು ತಹಶೀಲ್ದಾರ್ ರವರಿಗೆ ತಕರಾರು ಹಾಕಿದ್ದರು ಎಂದರೆ ಸುಳ್ಳು.

ಓಎಸ್ 09/2023

ಪಿಡಬ್ಲ್ಯೂ 1

ದಾವ ಆಸ್ತಿಗಳ ಖಾತೆಗಳು ನಾಗಾಚಾರಿ ರವರ ಹೆಸರಿಗೆ ಬದಲಾಗಿರುವ ವಿಚಾರ 1985 ರಲ್ಲಿಯೇ ನಮಗೆ ತಿಳಿದಿತ್ತು ಎಂದರೆ ಸುಳ್ಳು. ನಾವು ದಾವ ಆಸ್ತಿಗಳು ಮಾಲೀಕರು ಅಲ್ಲ ಮತ್ತು ಸ್ವಾಧೀನದಲ್ಲಿಯೂ ಇಲ್ಲ ಎಂದರೆ ಸರಿಯಲ್ಲ. 1983 ರಿಂದ ಇಲ್ಲಿಯವರೆಗೂ ದಾವ ಆಸ್ತಿಯಲ್ಲಿ ಸ್ವಾಧೀನ ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. 4 ರಿಂದ 7ನೇ ಪ್ರತಿವಾದಿಗಳಿಗೆ ಸೇರಿದ ಆಸ್ತಿಗಳನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ರಿಂದ 3ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಈಗಾಗಲೇ ಸಾಕಷ್ಟು ಸಮಯಾವಕಾಶ ನೀಡಿರುವುದರಿಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ